# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 336 |
| ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ |
| ಉತ್ತರಿಸುವ ದಿನಾಂಕ: | 12-12-2018 |
| ಉತ್ತರಿಸುವವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭೇಟಿ ನೀಡುವ ಹೊರ ರಾಜ್ಯದಲ್ಲಿರುವ ಎಷ್ಟು ಪುಣ್ಯಕ್ಷೇತ್ರಗಳಲ್ಲಿ ಕರ್ನಾಟಕ ಭವನ/ಛತ್ರಗಳನ್ನು ನಿರ್ಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯದ ಭಕ್ತಾದಿಗಳಿಗೆ ವಾಸ್ತವ್ಯ ಸೌಲಭ್ಯ ಕಲ್ಪಿಸಲು ಹೊರರಾಜ್ಯದ ಈ ಕೆಳಕಂಡ ಪುಣ್ಯ ಕ್ಷೇತ್ರಗಳಲ್ಲಿ ಕರ್ನಾಟಕ ರಾಜ್ಯಛತ್ರ (ಕರ್ನಾಟಕ ಭವನ)ವನ್ನು ನಿರ್ಮಿಸಲಾಗಿದೆ.<br><br>(ಕೆಳಗಿನ ಕೋಷ್ಟಕ ನೋಡಿ) |
| ಆ) | ಅವುಗಳಲ್ಲಿ ಮಹಾರಾಷ್ಟ್ರದಲ್ಲಿರುವ ಶಿರಡಿ, ಪಂಡರಾಪುರ ಮತ್ತು ಕೊಲ್ಹಾಪುರ ಪುಣ್ಯಕ್ಷೇತ್ರಗಳು ಒಳಗೊಂಡಿವೆಯೇ; | ಒಳಗೊಂಡಿರುವುದಿಲ್ಲ. |
| ಇ) | ಇಲ್ಲವಾದಲ್ಲಿ, ಸದರಿ ಕ್ಷೇತ್ರಗಳಲ್ಲಿ ಕರ್ನಾಟಕ ಭವನ ನಿರ್ಮಿಸಿರುವ ಚಿಂತನೆ ಸರ್ಕಾರದಲ್ಲಿಯೇ; | ಮಹಾರಾಷ್ಟ್ರ ರಾಜ್ಯದ ಶ್ರೀ ಕ್ಷೇತ್ರ ಪಂಡರಾಪುರದಲ್ಲಿ ಕರ್ನಾಟಕ ರಾಜ್ಯ ಛತ್ರ (ಕರ್ನಾಟಕ ಭವನ) ನಿರ್ಮಾಣ ಮಾಡಲು ಸರ್ಕಾರದ ಚಿಂತನೆಯಲ್ಲಿರುತ್ತದೆ. |
| ಈ) | ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಶ್ರೀ ಕ್ಷೇತ್ರ ಪಂಡರಾಪುರದಲ್ಲಿ ಕರ್ನಾಟಕ ರಾಜ್ಯದಿಂದ ಆಗಮಿಸುವ ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸುವ ಸಲುವಾಗಿ ಕರ್ನಾಟಕ ರಾಜ್ಯಛತ್ರ (ಕರ್ನಾಟಕ ಭವನ) ನಿರ್ಮಿಸಲು ಪಂಡರಾಪುರ ನಗರ ಸಭೆಯವರಿಂದ 2000ಚ.ಮೀ ಜಾಗವನ್ನು ಖರೀದಿಸಲಾಗಿರುತ್ತದೆ. ಸದರಿ ಜಾಗಕ್ಕೆ ಆವರಣ ಗೋಡೆಯನ್ನು ನಿರ್ಮಿಸಲಾಗಿರುತ್ತದೆ. ನಂತರ ಸದರಿ ಜಾಗದ ಬಗ್ಗೆ ವಿವಾದ (dispute) ಇರುವುದಾಗಿ ತಿಳಿದುಬಂದ ಹಿನ್ನೆಲೆಯಲ್ಲಿ ಸಂಬಂಧಪಟ್ಟವರೊಂದಿಗೆ ಸಂಪರ್ಕಿಸಿ ವಿವಾದವನ್ನು ಇತ್ಯರ್ಥಗೊಳಿಸಲಾಗಿರುತ್ತದೆ.<br><br>ಸದರಿ ಜಾಗದಲ್ಲಿ ಕರ್ನಾಟಕ ರಾಜ್ಯ ಛತ್ರವನ್ನು ನಿರ್ಮಿಸಲು ಮುಖ್ಯ ವಾಸ್ತು ಶಿಲ್ಪಿಯವರಿಂದ ನಕ್ಷೆಯನ್ನು ಪಡೆದು ಪಂಡರಾಪುರ ನಗರ ಸ್ಥಳೀಯ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿ ರೂ.22,000/-ಗಳ ಶುಲ್ಕವನ್ನು ಪಾವತಿಸಲಾಗಿರುತ್ತದೆ. |

(ಅ) ಉತ್ತರದ ಕೋಷ್ಟಕ:

| ಕ್ರ. ಸಂ. | ಹೊರರಾಜ್ಯ | ಪುಣ್ಯಕ್ಷೇತ್ರ |
|---|---|---|
| 1 | ಆಂಧ್ರಪ್ರದೇಶ | ತಿರುಮಲ, ತಿರುಚಾನೂರು, ಮಂತ್ರಾಲಯ, ಶ್ರೀಶೈಲಂ |
| 2 | ಮಹಾರಾಷ್ಟ್ರ | ತುಳಜಾಪುರ |
| 3 | ಉತ್ತರಪ್ರದೇಶ | ವಾರಣಾಸಿ |

| | | |
|---|---|---|
| | | ಮುಂದುವರೆದು ಸ್ಥಳೀಯ ಪ್ರಾಧಿಕಾರದಿಂದ ದಾಖಲೆಗಳನ್ನು ಕೋರಿದ್ದು, ಕೆಲವು ದಾಖಲೆಗಳನ್ನು ಸಲ್ಲಿಸಲಾಗಿರುತ್ತದೆ. ಇದೇ ಸಮಯದಲ್ಲಿ ಸದರಿ ಕಟ್ಟಡಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಕೊಡಲು ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರಿಗೆ ಕೋರಲಾಗಿರುತ್ತದೆ ಹಾಗೂ ಸರ್ಕಾರದ ವತಿಯಿಂದ ನಿವೇಶನದ ಬಗ್ಗೆ ಯಾವುದೇ ತಕರಾರು / ವಿವಾದ ಇಲ್ಲದೆ ಋಣಭಾರ ರಾಹಿತ್ಯದ ಬಗ್ಗೆ ಮಾಹಿತಿಯನ್ನು ನೀಡಲು ಕೋರಲಾಗಿರುತ್ತದೆ. |
| ಉ) | ಇಲ್ಲವಾದಲ್ಲಿ, ಇನ್ನು ಮುಂದೆಯಾದರೂ ಸದರಿ ಕ್ಷೇತ್ರಗಳಲ್ಲಿ ಕರ್ನಾಟಕ ಭವನಗಳನ್ನು / ಛತ್ರಗಳನ್ನು ನಿರ್ಮಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ? | ಶಿರಡಿ ಮತ್ತು ಕೊಲ್ಹಾಪುರ ಪುಣ್ಯ ಕ್ಷೇತ್ರಗಳಲ್ಲಿ ಕರ್ನಾಟಕ ಭವನಗಳನ್ನು / ಛತ್ರಗಳನ್ನು ನಿರ್ಮಿಸಲು ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

(ಸಂಖ್ಯೆ: ಕಂಇ 137 ಮುಸಪ್ರ 2018)

ರಾಜಶೇಖರ.ಬಿ.ಪಾಟೀಲ
(ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು)